ಅಭಿವ್ಯಕ್ತ ಮಾಡತಕ್ಕಂಥ ಅವಕಾಶವನ್ನು ನಾನು ಕಲ್ಪಿಸಿಕೊಟ್ಟಿದ್ದೇನೆ. ಹಾಗೆಯೇ ಎಲ್ಲಾ ಪಕ್ಷದ ಪ್ರತಿನಿಧಿಗಳೂ ಕೂಡ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಸದನ ನಡೆಯಬೇಕಾಗುತ್ತದೆ. ಸದನವು ಬಹುಮತದ ಅಭಿಪ್ರಾಯಗಳನ್ನು ಗಮನಿಸಿ ನಾವೇ ರೂಪಿಸಿರತಕ್ಕಂಥ ಕಾರ್ಯಕಲಾಪಗಳ ಚೌಕಟ್ಟಿನಲ್ಲಿ, ನಿಯಮಗಳ ಚೌಕಟ್ಟಿನಲ್ಲಿ ನಾವು ಸಭೆಯನ್ನು ನಡೆಸಬೇಕಾಗುತ್ತದೆ. ಅದನ್ನು ಅಡ್ಡಿ ಮಾಡತಕ್ಕಂಥಾದ್ದು ಪ್ರಜಾಪ್ರಭುತ್ವದ ನಿಯಮಗಳಿಗೆ ವಿರುದ್ಧವಾಗುತ್ತದೆ. ಈ ವಿಷಯದಲ್ಲಿ ನಾವು ಪಾರ್ಲಿಮೆಂಟರಿ ಸಂಪ್ರದಾಯಗಳಿಗೆ ತಿಲಾಂಜಲಿ ಕೊಡುವುದು ಸರಿಯಲ್ಲ. ಶ್ರೀ ಯಡಿಯೂರಪ್ಪನವರು ಈ ಸದನದ ಹಿರಿಯರು ಅವರನ್ನು ಅತ್ಯಂತ ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ, ನೀವು ಚಳವಳಿಯ ಮಾರ್ಗವನ್ನು ಹಿಡಿಯುವುದು ಪ್ರಜಾಪ್ರಭುತ್ವದಲ್ಲಿ ನಿಮಗಿರುವ ಹಕ್ಕು ಅದನ್ನು ಚಲಾಯಿಸುವ ವೇದಿಕೆ ಮಾತ್ರ ಬೇರೆ, ಇದಲ್ಲ. ಜನಾಭಿಪ್ರಾಯವನ್ನು ರೂಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ, ಅದೇ ಧಾಟಿಯಲ್ಲಿ ಮುಂದೆ ಹೋಗಲು ನಿಮಗೆ ಅವಕಾಶಗಳಿವೆ. ಆದರೆ ಈ ಸದನದ ಕಾರ್ಯಕಲಾಪಗಳನ್ನು ಅಡ್ಡಿ ಮಾಡುವುದರಿಂದ ನೀವು ರೈತರಿಗೆ ಯಾವ ವಿಧವಾದ ಅನುಕೂಲತೆಗಳನ್ನೂ ಮಾಡಿಕೊಡುತ್ತಿಲ್ಲವೆಂಬುದನ್ನು ತಾವು ಗಮನಿಸಬೇಕು. ಈಗ ಪ್ರಶ್ನೋತ್ತರ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರು ಈ ಮಾತು ಹೇಳಿ ರಾಜೀನಾಮೆ ಕೊಟ್ಟು ಚುನಾವಣೆಗೆ ನಿಂತ್ರೆ ಗೆದ್ದು ಬರಲಿ ಸ್ವಾಮಿ, ಜನ ಪಾಠ ಕಲಿಸುತ್ತಾರೆ.

(ಗೊಂದಲ)

(ಯಡಿಯೂರಪ್ಪನವರು ಮತ್ತೆ ಧರಣಿ ಕುಳಿತರು)

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಸ್ವಾಮಿ ನನ್ನ ೨೭೦ನೇ ಸಂಖ್ಯೆ ಪ್ರಶ್ನೆ ಕೇಳುವ ಮೊದಲು ಪ್ರಶ್ನೋತ್ತರಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಬೇಕು.

ಶ್ರೀ ವಾಟಾಳ್ ನಾಗರಾಜ್.—ನಾನು ಆಗಲೇ ಒಂದು ಸಲಹೆ ಕೊಟ್ಟೆ, ಅಧ್ಯಕ್ಷರು ಅದನ್ನು ಗಮನಿಸಿದ್ದೀರೋ ಇಲ್ಲವೋ ಗೊತ್ತಾಗಲಿಲ್ಲ. ಏಕೆಂದರೆ ತಮ್ಮ ಕಾರ್ಯಾಲಯದಲ್ಲಿ ಏನಾದರೂ ಈ ಧರಣಿ ಬಗ್ಗೆ ಮಾಡಬೇಕು ಸ್ವಾಮಿ. ನನಗೆ ಗೊತ್ತು ತಮಗೆ ಅಧಿಕಾರ ಇದೆ.

ಅಧ್ಯಕ್ಷರು.—ಅಧಿಕಾರ ನನಗಿಲ್ಲ, ಸಭೆಗಿದೆ.

ಶ್ರೀ ವಾಟಾಳ್ ನಾಗರಾಜ್.—೧೮ ನಿಮಿಷದಲ್ಲಿ ತೀರ್ಮಾನ ತೆಗೆದುಕೊಳ್ಳಬಹುದು. ಈ ರೀತಿ ಧರಣಿ ಕುಳಿತಾಗ ನಾವು ಸಭೆ ನಡೆಸುವುದು ಸರಿಯೇ ತಮಗೆ ಬಿಟ್ಟಿದ್ದು ದು.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಯಡಿಯೂರಪ್ಪನವರು.....

MR. SPEAKER.—That is over. Please do not raise that issue again.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ನಾನು ಕಳಂಹಿಸುವ ಎಲ್ಲಾ ಪ್ರಶ್ನೆಗಳ ಕಾರ್ಬನ್ ಕಾಪಿ ಗಳನ್ನು ನಾನು ಇಟ್ಟುಕೊಂಡಿದ್ದೇನೆ ಆದರೆ ಕಳೆದ ಅಧಿವೇಶನ ಮತ್ತು ಈ ಅಧಿವೇಶನಗಳಲ್ಲಿ ನಾನು ಕಳಂಹಿಸಿದ ಪ್ರಶ್ನೆಗಳು ಬದಲಾಗುತ್ತಿವೆ.

ಅಧ್ಯಕ್ಷರು.—ವಿಕೃತವಾಗಿದೆ ಎಂದು ನಿಮ್ಮ ಅಭಿಪ್ರಾಯವೇ?

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಹಾದು. ಕಳೆದ ಅಧಿವೇಶನದಲ್ಲಿ ಗಣಿ ಮತ್ತು ಭೂಗರ್ಭ ಇಲಾಖೆ ಕುರಿತು ೮೦ರಿಂದ ೯೦ರವರೆಗೆ ನಮ್ಮ ಗಣಿ ಗುತ್ತಿಗೆದಾರರು ಕೊಡಬೇಕಾಗಿರುವ ರಾಯಲ್ಟಿ ಬಾಕಿ ಎಷ್ಟು ಎಂದಿದ್ದಕ್ಕೆ ೭೮ರಿಂದ ೯೦ರವರೆಗೆ ಎಂದು ಯಾರೋ ಆಡಿಷನಲ್ ಸೆಕ್ರೆಟರಿ ಅಂತೆ ಅವರು ಉತ್ತರ ಕೊಡಿಸಿದ್ದಾರೆ. ಮತ್ತೆ ಇವತ್ತು ಕಳೆದ ೧೦ ವರ್ಷಗಳಿಂದ ರೋಗಗ್ರಸ್ತ ಕೈಗಾರಿಕೆಗಳೆಂದು ರಾಜ್ಯಸರ್ಕಾರ ಪರಿಗಣಿಸಲಾದ ಕೈಗಾರಿಕೆಗಳೆಷ್ಟು ಎಂದು ಕೇಳಿ ಕಾರ್ಬನ್ ಕಾಪಿ ಇಟ್ಟುಕೊಂಡಿದ್ದೆ, ಆದರೆ ಇವತ್ತು ಅದು ೮೮ರಿಂದ ೯೦ ಎಂದು ಆಚ್ಚಾಗಿದೆ. ಅಂದರೆ ನಾವು ಏನು ಅರ್ಥಮಾಡಿಕೊಳ್ಳಬೇಕು? ಮತ್ತೆ ಎರಡನೇ ಪ್ರಶ್ನೆಯಲ್ಲಿ ಕಳೆದ ೧೦ ವರ್ಷಗಳಿಂದ ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲ ರದ್ದುಮಾಡಿದ ಮೊಬಲಗು ಎಷ್ಟು ಎಂದು ಕೇಳಿದ್ದರೆ ಇವರು ಬರೀ ಎರಡು ವರ್ಷದ್ದು ಮಾತ್ರ ಕೊಟ್ಟಿದ್ದಾರೆ.

ಅಧ್ಯಕ್ಷರು.—ನಿಮ್ಮ ಮೂಲ ಪ್ರಶ್ನೆಯನ್ನು ನೋಡಿದ್ದೇನೆ. ತಾವು ೮೦ರಿಂದ ೯೦ರವರೆಗೆ ರಾಜ್ಯಸರ್ಕಾರ ಪರಿಗಣಿಸಿದ ರೋಗಗ್ರಸ್ತ ಕೈಗಾರಿಕೆಗಳ ಸಂಖ್ಯೆ ಎಷ್ಟೆಂದು ಕೇಳಿದ್ದೀರಿ ಅದಕ್ಕೆ ನಮ್ಮ